ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/109/2015-16. ದಿನಾಂಕ:19-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಉಜ್ಜನಿ ಹಾಲಪ್ಪ ತಂದೆ ಪರುಸಪ್ಪ<br>2)ಉಜ್ಜನಿ ಚನ್ನಮ್ಮ ಗಂಡ ಲೇಟ್ ಉಜ್ಜನಿ ನಾಗಪ್ಪ<br>3)ಉಜ್ಜನಿ ತಿಂದಪ್ಪ ತಂದೆ ಲೇಟ್ ನರಗಪ್ಪ<br>ಹರಾಳು ಗ್ರಾಮ ಕೂಡ್ಲಿಗಿ ತಾಲೂಕು | ರೇಣುಕಮ್ಮ ಗಂಡ ಲೇಟ್ ಉಜ್ಜನಿ<br>ಸಣ್ಣ ಕೆಂಚಪ್ಪ<br>ಹರಾಳು ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 310/1. ವಿಸ್ತೀರ್ಣ 4-95. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 310/1. ವಿಸ್ತೀರ್ಣ 4-95. ಎಕ್ರೆ ಜಮೀನನ್ನು ಸದರಿ ತಾಲೂಕು ಹರಾಳು ಗ್ರಾಮದ ಉಜ್ಜನಿ ಹಾಲಪ್ಪ ತಂದೆ ಪರುಸಪ್ಪ ಇವರು ದಿನಾಂಕ 23-04-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೆ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 25-11-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ನಮೂನೆ-21ಕ್ಕೂ ಹಾಗೂ ವಂಶವೃಕ್ಷಕ್ಕೂ ತಾಳೆ ಇಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 50/2015-16. ದಿನಾಂಕ 24-12-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-04-2016 ರಿಂದ 19-07-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 310/1. ವಿಸ್ತೀರ್ಣ 4-95. ಎಕ್ರೆ ಜಮೀನು ಅರ್ಜಿದಾರರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಇವರು ದಿನಾಂಕ 23-04-2015 ರಂದು ಪಾಲು ವಿಭಾಗದ ಪತ್ರ ಬರೆಯಿಸಿರುತ್ತಾರೆ.ಹಾಗೂ ಅದರ ಪ್ರಕಾರ ಅಳತೆ ಮಾಡಿಸಿ 11ಇ.ನಕ್ಷೆಯನ್ನು ಪಡೆದಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೆ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಅರ್ಜಿದಾರರ ತಂದೆ ನಾಗಪ್ಪ ಮತ್ತು ತಕರಾರುದಾರರಾದ ರೇಣುಕಮ್ಮ ಗಂಡ ಲೇಟ್ ಉಜ್ಜನಿ ಸಣ್ಣ ಕೆಂಚಪ್ಪ ಇವರ ಜಂಟಿ ಕುಟುಂಬದ ಆಸ್ತೀಯಾಗಿದ್ದು ಅರ್ಜಿದಾರರ ತಂದೆ ನಾಗಪ್ಪ ಇವರು ಕೂಡ್ಲಿಗಿಯ ಹಿರಿಯ ಶ್ರೇಣಿ ನ್ಯಾಯಾಲಯ ಓ.ಎಸ್.ನಂಬರ್: 80/2008 ರಲ್ಲಿ ತಕರಾರುದಾರರ ಗಂಡನ ವಿರುದ್ದ ಧಾವೆ ಹೂಡಿದ್ದು ಸದರಿ ಧಾವೆಯು ವಿಚಾರಣೆ ಹಂತದಲ್ಲಿರುವಾಗ ಎರಡನೇ ತಕರಾರುದಾರರ ಗಂಡ ಉಜ್ಜನಿ ಸಣ್ಣ ಕೆಂಚಪ್ಪ ಇವರು ಮರಣ ಹೊಂದಿದ್ದು ಕಾರಣ ಸದರಿ ರೇಣುಕಮ್ಮ ಗಂಡ ಉಜ್ಜನಿ ಸಣ್ಣ ಕೆಂಚಪ್ಪ ಇವರನ್ನು ಕಾನೂನು ರೀತಿಯಾ ವಾರಸುದಾರರೆಂದು ಸದರಿ ಧಾವೆಯಲ್ಲಿ ಸೇರಿಸುತ್ತಾ ಸದರಿ ಧಾವೆಯು ದಿನಾಂಕ 28-09-2011 ರಂದು ವಜಾ ಆಗಿರುತ್ತದೆ. ಹಾಗೂ ಸದರಿ ಆಸ್ತೀಯು ಜಂಟಿ ಕುಟುಂಬದ ಆಸ್ತೀಯೇಂದು ನ್ಯಾಯಾಲಯವು ಆದೇಶಿಸಿರುತ್ತಾರೆ.

ಸದರಿ ಆದೇಶದ ವಿರುದ್ಧ ನಾಗಪ್ಪ ಇವರು ಹಿರಿಯ ಶ್ರೇಣಿ ನ್ಯಾಯಾಲಯ ಕೂಡ್ಲಿಗಿಯಲ್ಲಿ ಆರ್.ಎ.ನಂಬರ್: 56/2011 ರಲ್ಲಿ ಅಪೀಲು ಧಾವೆ ಸಲ್ಲಿಸಿರುತ್ತಾರೆ. ಸದರಿ ಅಪೀಲು ದಿನಾಂಕ 11-01-2013 ರಲ್ಲಿ ಧಾವೆಯು ಸಹಾ ವಜಾ ಆಗಿದ್ದು ಜಂಟಿ ಕುಟುಂಬದ ಆಸ್ತೀಯೇಂದು ಕಿರಿಯ ಶ್ರೇಣಿ ನ್ಯಾಯಾಲಯ ಓ.ಎಸ್.ನಂಬರ್: 80/2008 ರಲ್ಲಿ ನೀಡಿದ ಆದೇಶವು ಸರಿ ಇರುತ್ತದೆಯೇಂದು ಆದೇಶಿಸಿರುತ್ತಾರೆ.

ಸದರಿ ಅರ್ಜಿದಾರರು ಪಾಲು ವಿಭಾಗದ ಪತ್ರದಲ್ಲಿ ತಕರಾರುದಾರರಿಗೆ ತಿಳಿಸದೇ ಮತ್ತು ಅವರನ್ನು ಬಿಟ್ಟು ಮಾಡಿ ಕೊಂಡ ಪಾಲು ವಿಭಾಗದ ಪತ್ರವು ಸುಳ್ಳಿನಿಂದ ಕೂಡಿದ್ದು ಕಾನೂನು ರೀತಿ ಅನೂರ್ಜಿತವಾಗಿರುತ್ತದೆ. ಕಂದಾಯ ನ್ಯಾಯಾಲಯಕ್ಕೆ ಹಕ್ಕನ್ನು ಕುರಿತು ಆದೇಶಿಸುವ ಅಧಿಕಾರ ಇಲ್ಲದ ಕಾರಣ ಸದರಿ ಖಾತಾ ಬದಲಾವಣೆ ಅರ್ಜಿಯನ್ನು ತಿರಸ್ಕರಿಸುತ್ತಾ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡು ಕೊಳ್ಳುವಂತೆ ಆದೇಶಿಸಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 310/1. ವಿಸ್ತೀರ್ಣ 4-95. ಎಕ್ರೆ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡು ಕೊಳ್ಳಲು ಸೂಚಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಚನ್ನಮ್ಮ ಗಂಡ ಲೇಟ್ ಲೇಟ್ ಉಜ್ಜನಿ ನಾಗಪ್ಪ ಹಾಗೂ ಇತರರು ಹರಾಳು ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎಂ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ರೇಣುಕಮ್ಮ ಗಂಡ ಲೇಟ್ ಉಜ್ಜನಿ ಸಣ್ಣ ಕೆಂಚಪ್ಪ ಹರಾಳು ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್. ಗುರುರಾಜ್‌ರಾವ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.